# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಇಂಡಿ.

**OS No. 423/2012.**

**PW: 1**

**ದಿನಾಂಕ 16-07-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ 5 ನೇ ಪ್ರತಿವಾದಿ ಪರ ಶ್ರೀ. ಬಿ.ಬಿ.ಕೆ ವಕೀಲರಿಂದ :**

ನನ್ನ ಮದುವೆ 2003 ನೇ ಸಾಲಿನಲ್ಲಿ ಆಗಿರುತ್ತದೆ. 2 ನೇ ಪ್ರತಿವಾದಿ ಮದುವೆ 1999 ನೇ ಸಾಲಿನಲ್ಲಿ, 2008 ನೇ ಸಾಲಿನಲ್ಲಿ 3 ನೇ ಪ್ರತಿವಾದಿ, 4 ನೇ ಪ್ರತಿವಾದಿ 2009 ನೇ ಸಾಲಿನಲ್ಲಿ ಆಗಿರುತ್ತದೆ. ನಮ್ಮ ಎಲ್ಲರ ಮದುವೆಯನ್ನು ನಮ್ಮ ತಂದೆ ತಾಯಿ ಮಾಡಿರುತ್ತಾರೆ ಎಂದರೆ ಸರಿ. ನಮ್ಮ ತಂದೆ ತಾಯಿ ಮುಂಚಿನಿಂದಲೂ ಇಂಡಿಯಲ್ಲಿ ವಾಸವಾಗಿರುತ್ತಾರೆ. ನಾನು ವಾದ ಪತ್ರಕ್ಕೆ ಮಾಹಿತಿಯುನ್ನು ನಾನೇ ನೀಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನನ್ನ ತಂದೆ ಹೆಸರಿನಲ್ಲಿ ಸದ್ಯ ಮನೆ ಇರುತ್ತದೆ. ಸದರಿ ಮನೆಯನ್ನು ನನ್ನ ತಂದೆ ಸ್ವಂತ ಕಟ್ಟಿರುತ್ತಾರೆ. 2008 ನೇ ಸಾಲಿನಲ್ಲಿ ಸದರಿ ಮನೆಯನ್ನು ಕಟ್ಟಿರುತ್ತಾರೆ. ನಾವು ಮುಂಚೆ ನಮ್ಮ ಹಳೆಯ ಮನೆಯಲ್ಲಿ ವಾಸವಾಗಿದ್ದೇವು, ನಂತರ ಅವರು ಹೊಸ ಮನೆಗೆ ಬಂದಿರುತ್ತಾರೆ. ನಮ್ಮ ತಂದೆ ಮೂಲ ಆಸ್ತಿ 3 ಎಕರೆ 24 ಗುಂಟೆ ಜಮೀನು ಮಾತ್ರ ಇತ್ತು. ಸದರಿ ಜಮೀನು ಯಾವ ಸಾಲಿನಿಂದ ನಮ್ಮ ತಂದೆ ಹೆಸರಿಗೆ ಖಾತೆ ಇರುತ್ತದೆ ಅಂತಾ ನನಗೆ ಮಾಹಿತಿ ಇಲ್ಲ. ನನ್ನ ಅಜ್ಜನಿಂದ ನನ್ನ ತಂದೆಗೆ ಸುಮಾರು 9 ಎಕರೆ ಜಮೀನು ಬಂದಿತ್ತು. ನನ್ನ ತಂದೆ ತಾಯಿ ಸಾಕಷ್ಟು ಸಾರಿ ಜಗಳ ಮಾಡುತ್ತಿದ್ದರು. ಅವರು ಗಂಡ ಹೆಂಡತಿ ಜಗಳ. ದಾವಾ ಆಸ್ತಿ ಸದ್ಯ ಯಾರ ಹೆಸರಿಗೆ ಇದೆ ಅಂತಾ ನನಗೆ ಮಾಹಿತಿ ಇಲ್ಲ. ನಾನು ನನಗೆ 3 ಎಕರೆ 25 ಗುಂಟೆ ಜಮೀನಿನಲ್ಲಿ ಭಾಗ ಬೇಕು ಅಂತಾ ಈ ದಾವೆಯನ್ನು ದಾಖಲಿಸಿರುತ್ತೇನೆ. ನಮ್ಮ ತಂದೆಗೆ ಇಬ್ಬರೂ ಸಹೋದರರು. ನನ್ನ ತಂದೆಯ ಹಿರಿಯ ಸಹೋದಾರ ವ್ಯಾಪಾರ ಮಾಡುತ್ತಾರೆ. ನನ್ನ ಚಿಕ್ಕಪ್ಪ ಟೈಲ್ಸ್ ಮತ್ತು ಗ್ರಾನೇಟ್ ವ್ಯಾಪಾರ ಮಾಡುತ್ತಾರೆ. ನನ್ನ ತಂದೆಯ ಸಹೋದರಿಯ ಮಕ್ಕಳಲ್ಲಿ ಒಬ್ಬರು ಇಲ್ಲಿ ಇರುತ್ತಾರೆ, ಇನ್ನೂಳಿದರು ಮುಂಬೈಯಲ್ಲಿ ಇರುತ್ತಾರೆ, ಅವರು ಸಹ ಟೈಲ್ಸ್ ಮತ್ತು ಗ್ರಾನೇಟ್ ವ್ಯಾಪಾರ ಮಾಡುತ್ತಾರೆ. ನನ್ನ ತಂದೆ ಯಾವುದೇ ವ್ಯವಹಾರ ಮಾಡುವುದಿಲ್ಲ, ವ್ಯವಸಾಯ ಮಾಡುತ್ತಾರೆ.

ನನ್ನ ತಂದೆ ನಮ್ಮ 4 ಸಹೋದರಿಯರಿಗೆ ಮದುವೆಗಾಗಿ ಸುಮಾರು ತಲಾ ಎರಡು ಲಕ್ಷ ಖರ್ಚು ಮಾಡಿರುತ್ತಾರೆ ಎಂದರೆ ಇರಬಹುದು ಅಂತಾ ಸಾಕ್ಷಿ ನುಡಿಯುತ್ತಾರೆ. ನನ್ನ ತಂದೆ ಇಂಡಿಯಲ್ಲಿ ಒಂದು ಕಟ್ಟಡ ಕಟ್ಟಿರುತ್ತಾರೆ ಎಂದರೆ ಸರಿ. ಸದರಿ ಕಟ್ಟಡ 30X90 ಅಳತೆದ್ದು ಆಗಿರುತ್ತದೆ ಎಂದರೆ ಸರಿ. ಸದರಿ ಕಟ್ಟಡ ಕಟ್ಟಲು ಸುಮಾರು 60-75 ಲಕ್ಷ ಖರ್ಚು ಆಗಿರಬಹುದು ಎಂದರೆ ಸರಿಯಲ್ಲ. ಸದರಿ ಕಟ್ಟಡದ ಕೆಳಮಹಡಿಯಲ್ಲಿ ಅಂಗಡಿಗಳು ಇರುತ್ತವೆ ಎಂದರೆ ಸರಿ. ಮೇಲೆ ಅಂತಸ್ತಿನಲ್ಲಿ ನನ್ನ ತಂದೆ ತಾಯಿ ವಾಸವಾಗಿರುತ್ತಾರೆ. ನನ್ನ ತಂದೆ ಹೆಸರಿಗೆ 3 ಮನೆ 2 ಜಮೀನು ಇದ್ದು, ಅವು ನಾವು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ 3 ಎಕರೆ ಜಮೀನನ್ನು ಮಾರಾಟ ಮಾಡಿ ನಮ್ಮ ಮದುವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿ ಗಂಡನಿಗೆ ನನ್ನ ತಂದೆ ಮನೆ ಮಾರಾಟ ಸುಮಾರು 10 ವರ್ಷಗಳ ಹಿಂದೆ ಮಾರಾಟ ಮಾಡಿದ್ದರು ಎಂದರೆ ಸರಿ. ಸದರಿ ಮನೆ ಮಾರಾಟ ಮಾಡಿದ ಬಂದ ಹಣದಿಂದ ಆಸ್ತಿ ಅನುಕ್ರಮ ನಂ. 1053/6X2 ರಲ್ಲಿ ಕಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದ ನಾವು ಹಣ ನೀಡಿರುತ್ತೇವೆ ಅಂತಾ ನುಡಿಯುತ್ತಾರೆ. 5 ನೇ ಪ್ರತಿವಾದಿಗೆ 1999 ನೇ ಸಾಲಿನಲ್ಲಿ ದಾವಾ ಅಸ್ತಿ ಅನುಕ್ರಮ ನಂ. 1 ರ ಕುರಿತು ಖರೀದಿ ಕರಾರು ಪತ್ರ ಆಗಿತ್ತು ಎಂದರೆ ಮಾಹಿತಿ ಇಲ್ಲ. ಸದರಿ ಕರಾರು ಪತ್ರ ಮಾಡಿಕೊಂಡು 2 ಲಕ್ಷ ಹಣ ಪಡೆದುಕೊಂಡಿದ್ದರು ಎಂದರೆ ಸರಿ. 2001 ನೇ ಸಾಲಿನಲ್ಲಿ 1,10,000/- ಹಣ ಪಡೆದಿದ್ದರೂ ಎಂದರೆ ಮಾಹಿತಿ ಇಲ್ಲ. ಸದರಿ ಆಸ್ತಿಯನ್ನು ನಂತರ ಖರೀದಿ ಕೊಡಬಾರದು ಅಂತಾ ನನ್ನ ತಂದೆ ಮುಂದೂಡುತ್ತಾ ಬಂದರು ಎಂದರೆ ಮಾಹಿತಿ ಇಲ್ಲ. ದಿಃ 04.11.2008 ರಂದು ಪಂಚಾಯಿತಿ ಮಾಡಿದ ಮೇರೆಗೇ ನನ್ನ ತಂದೆ 5 ನೇ ಪ್ರತಿವಾದಿಗೆ ನೋಂದಾಯಿತ ಖರೀದಿ ಪತ್ರ ಮಾಡಿಕೊಟ್ಟರು ಎಂದರೆ ಮಾಹಿತಿ ಇಲ್ಲ. ನನ್ನ ತಂದೆ ಜೂಜಾಟ, ಮಟ್ಕಾ ಆಡುತಿರಲಿಲ್ಲ. ನನ್ನ ತಂದೆ ಮದ್ಯಪಾನ ಮಾಡುವ ಸಲುವಾಗಿ ಯಾರ ಹತ್ತಿರ ಸಾಲ ಮಾಡಿರುವ ಕುರಿತು ನನಗೆ ಮಾಹಿತಿ ಇಲ್ಲ. ನನ್ನ ತಂದೆ ಜೂಜಾಟ ಮತ್ತು ಮದ್ಯಪಾನದ ದುಶ್ಚಟ್ಟಕ್ಕಾಗಿ ಸದರಿ ಆಸ್ತಿಯನ್ನು ಮಾರಾಟ ಮಾಡಿಲ್ಲ, ನಮ್ಮ ಮದುವೆ ಖರ್ಚಿಗಾಗಿ ಮಾರಾಟ ಮಾಡಿರುತ್ತಾರೆ ಎಂದರೆ ಮಾಹಿತಿ ಇಲ್ಲ. ನನ್ನ ತಂದೆ ತಾಯಿ ಪರಸ್ಪರ ಜಗಳ ಆಡುತ್ತಿದ್ದರು, ಆದರೆ ನನ್ನ ತಾಯಿ ಎಂದೂ ಮನೆ ಬಿಟ್ಟು ಹೋಗಿಲ್ಲ. ನನ್ನ ತಾಯಿ ಹೆಸರಿಗೆ ನನ್ನ ತಂದ 5 ಎಕರೆ ಜಮೀನನ್ನು ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿ. ನನ್ನ ತಾಯಿಯ ಉಪ ಜೀವನಕ್ಕಾಗಿ ನನ್ನ ತಂದೆ

5 ಎಕರೆ ಜಮೀನನ್ನು ಬಿಡುವ ಪ್ರಮಯ ಉಂಟು ಆಗಿಲ್ಲವುದಿಲ್ಲ ಈ ದಾವೆಯಲ್ಲಿ ಮತ್ತೆನಾದರೂ ತಕಾರಾು ಸಲ್ಲಿಸುತ್ತಾರ ಅಂತಾ ಮುಂದೂಲೋಚನೆ ಮಾಡಿ ಸದರಿ ಆಸ್ತಿಯನ್ನು ನನ್ನ ತಾಯಿ ಆಸ್ತಿಯನ್ನು ಬಿಟ್ಟುರುತ್ತಾರೆ ಎಂದರೆ ಮಾಹಿತಿ ಇಲ್ಲ. ನನ್ನ ತಂದೆ ತಾಯಿ ಹೊಟ್ಟಿಗೆ ಇದುದ್ದರಿಂದ ನನ್ನ ತಾಯಿಗೆ ಜೀವನಾಂಶಕ್ಕಾಗಿ 5 ಎಕರೆ ಜಮೀನುನ್ನು ಬಿಡು ಪ್ರಮಯ ಬರುವುದಿಲ್ಲ, ಈ ದಾವೆಯಲ್ಲಿ ತಕಾರಾರು ಬರುಬಹವುದೆಂಬ ದುರುದ್ದೆಶದಿಂದ ನಾನು ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೆಸರಿಗೆ ಸುಮಾರು 50-60 ಲಕ್ಷ ಬೆಳೆ ಬಾಳು ಆಸ್ತಿಯನ್ನು ಬಿಟ್ಟುಕೊಟ್ಟಿದ್ದರೂ ಸಹ ದುರುದ್ದೇಶದಿಂದ ಖೊಟ್ಟಿ ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ 6 ನೇ ಪ್ರತಿವಾದಿಗೆ ಮಾರಾಟ ಮಾಡಿದ ಆಸ್ತಿಯಲ್ಲಿ ನಾನು ಭಾಗ ಕೇಳುವುದಿಲ್ಲ ಬರೆದಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ. ಸರಿ ಇದೆ.
ಸಹಿ/-

ಜೆ.ಎಂ.ಎಫ್.ಸಿ. ನ್ಯಾಯಾಲಯ
ಇಂಡಿ.